ಓ ಎಸ್ ನಂಃ 22/2023 ಪಿ.ಡಬ್ಲ್ಯು (1)

**ದಿನಾಂಕಃ 25-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಎಸ್.ಸಿ.ಕೆ. ವಕೀಲರಿಂದಃ**

ವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ನಮೂದಿಸಿದ ವಿಷಯಗಳು ನನಗೆ ತಿಳಿದಿರುತ್ತವೆ. ಈ ದಾವೆಯಲ್ಲಿ ಪ್ರತಿವಾದಿಯರು ಸಲ್ಲಿಸಿದ ಕೈಪಿಯತ್ತ, ತಕರಾರು ಮತ್ತು ಅವರು ಸಲ್ಲಿಸಿದ ದಾಖಲಾತಿಗಳ ಬಗ್ಗೆ ಮಾಹಿತಿ ಇರುತ್ತದೆ. ನನ್ನ ತಂದೆ ಹೆಸರು ಕಪ್ಪತೇಶ್ವರಪ್ಪ. ನನ್ನ ಅಜ್ಜನ ಹೆಸರು ರಾಮಚಂದ್ರಪ್ಪ. ರಾಮಚಂದ್ರಪ್ಪ ಇವರು ನಮ್ಮ ತಂದೆ ಚಿಕ್ಕವರಿರುವಾಗಲೇ ತೀರಿಕೊಂಡಿರುತ್ತಾರೆ. ರಾಮಚಂದ್ರಪ್ಪ ಇವರಿಗೆ 4 ಜನ ಗಂಡು ಮಕ್ಕಳು, 4 ಜನ ಹೆಣ್ಣು ಮಕ್ಕಳು. ಅವರೆಂದರೆ ಕಪ್ಪತೇಶ್ವರ, ಕಪ್ಪತಸೊಮೇಶ್ವರ, ಕಪ್ಪತ ಮಲ್ಲಣ್ಣ, ಬಸಣಪ್ಪ, ನಾಗರತ್ನ, ಗಂಗಮ್ಮ, ಪಾರ್ವತಿ, ಭಾಗ್ಯಲಕ್ಷ್ಮೀ. ನನ್ನ ಅಜ್ಜನಿಗೆ ಸಿದ್ದರತ್ನಮ್ಮ ಅಂತಾ ಮಗಳು ಇರಲಿಲ್ಲಾ. ರಾಮಚಂದ್ರಪ್ಪರವರಿಗೆ ಸಿದ್ದರತ್ನಮ್ಮ ಅಂತಾ ಮಗಳು ಇದ್ದಳು ಎಂದರೆ ನನಗೆ ಗೊತ್ತಿಲ್ಲ. ನಾನು ಮೇಲೆ ಹೇಳಿದ ರಾಮಚಂದ್ರಪ್ಪನ ಮಕ್ಕಳೊಂದಿಗೆ ಸಿದ್ದರತ್ನಮ್ಮ ಎಂಬುವವಳು ಇದ್ದಳು ಎಂದರೆ ನನಗೆ ಗೊತ್ತಿಲ್ಲ. ಸಿದ್ದರತ್ನಮ್ಮ ಎಂಬ ಮಗಳು ಇರುವ ಕುರಿತು ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ರಾಮಚಂದ್ರಪ್ಪನ ಮಕ್ಕಳಲ್ಲಿ ಭಾಗ್ಯಲಕ್ಷೀ ಮಾತ್ರ ಜೀವಂತವಾಗಿರುತ್ತಾರೆ ಇನ್ನೂಳಿದವರು ಎಲ್ಲರೂ ಮೃತಪಟ್ಟಿರುತ್ತಾರೆ. ಬಸವಣೆಪ್ಪ ಮತ್ತು ಕಪ್ಪತ ಸೋಮಪ್ಪ ರವರಿಗೆ ಮದುವೆಯಾಗಿರಲಿಲ್ಲಾ. ಸದರಿಯವರು ಯಾವ ಸಾಲಿನಲ್ಲಿ ಮೃತಪಟ್ಟಿದ್ದಾರೆ ಅಂತಾ ನನಗೆ ಗೊತ್ತಿಲ್ಲ.

2. ನನ್ನ ತಂದೆಯವರು 1990 ರಲ್ಲಿ ಮೃತಪಟ್ಟಿರುತ್ತಾರೆ. ಪಾರ್ವತಿಯವರು ಯಾವಾಗ ತೀರಿಕೊಂಡಿರುವರು ಎಂದು ನನಗೆ ಗೊತ್ತಿಲ್ಲ. ಸದರಿಯವರ ಮಕ್ಕಳ ಹೆಸರು ಶಾಂತಿ ಮತ್ತು ರಾಜು. ಕಪ್ಪತಮಲ್ಲಯ್ಯರವರು ಯಾವಾಗ ತೀರಿಕೊಂಡಿದ್ದಾರೆ ಗೊತ್ತಿಲ್ಲ. ಅವರಿಗೆ 5 ಜನ ಮಕ್ಕಳು ಅವರೆಂದರೆ ಕಮಲಾ, ಕವಿತಾ, ಕಲ್ಪಿತಾ, ಗಂಗಾ, ರಾಮಚಂದ್ರ, ಸದರಿಯವರಿಗೆ ಕವನ ಅಂತಾ ಮಗಳು ಇರುತ್ತಾಳೆ ಎಂದರೆ ಸರಿ. ಸಿದ್ದರತ್ನಮ್ಮಳಿಗೆ 5 ಜನ ಮಕ್ಕಳು ಅವರ ಹೆಸರು ಬಾಬು, ವಿಜಯಲಕ್ಷ್ಮೀ ರಾಮಚಂದ್ರಪ್ಪ, ವಿಮಲಾ, ಲಕ್ಷ್ಮಣ, ವಿದ್ಯಾ ಎಂದರೆ ಸರಿ. ನಮ್ಮ ಅಜ್ಜ ತೀರಿಕೊಂಡ ನಂತರ ಮನೆತನದ ಹಿರಿಯತನವನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ನನ್ನ ಅಜ್ಜ ತೀರಿಕೊಂಡ ನಂತರ ನಮ್ಮ ಕುಟುಂಬದ ಸಂಪೂರ್ಣ ಜವಾಬ್ದಾರಿಯನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಕುಟುಂಬದಲ್ಲಿ ಇಲ್ಲಿಯವರೆಗೆ ವಿಭಾಗವಾಗಿದ್ದು ಇರುವುದಿಲ್ಲ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನ ಅಜ್ಜನ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯವಕಾಶ ಕೇಳಿದ್ದು ಮುಂದೂಡಲಾಯಿತು.**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.
ಸಹಿ/-
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ಕೊಪ್ಪಳ.**